# ವಸಾಹತು ಶಾಹಿ ಕಾಲದ ಬಾಂಬೆ ಕರ್ನಾಟಕದಲ್ಲಿ ಸಾಮಾಜಿಕ ಚಳುವಳಿ

**ಎಸ್.ಎಂ. ಹೆಳವರ**

ಇತಿಹಾಸ ವಿಭಾಗದ ಮುಖ್ಯಸ್ಥರು, ಎಸ್.ಪಿ.ಎಂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ ಹಾಗೂ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ಹಾರೂಗೇರಿ.

DOI: https://doi.org/10.5281/zenodo.17296071

## ABSTRACT:

ಬ್ರಿಟಿಷರ ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲಿ ಬಾಂಬೆ ಕರ್ನಾಟಕದಲ್ಲಿ ಸಾಮಾಜಿಕ ಬದಲಾವಣೆಗಳು ಪ್ರಾರಂಭವಾದವು. ಜಾತಿಯತೆ, ಅಸ್ಪೃಶ್ಯತೆ, ಅಂಧಶ್ರದ್ಧೆ, ಮೂಢನಂಬಿಕೆ, ಅಜ್ಞಾನ, ಅಂಧಕಾರ, ಮಹಿಳೆಯರ ಮೇಲಿನ ಅನ್ಯಾಯ ಹಾಗೂ ಹಿಂದುಳಿದ ವರ್ಗಗಳ ಶೋಷಣೆಯನ್ನು ಪರಿಹರಿಸಲು ಅನೇಕ ಸುಧಾರಣಾ ಚಳುವಳಿಗಳು ಹುಟ್ಟಿಕೊಂಡವು. ಪ್ರಾರ್ಥನಾ ಸಮಾಜ, ಆರ್ಯ ಸಮಾಜ, ಲಿಂಗಾಯತ ಮಠಗಳು ಧಾರ್ಮಿಕ ಸಾಮಾಜಿಕ ಸುಧಾರಣೆಗಳಲ್ಲಿ ಮುಂಚೂಣಿಗೆ ಬಂದವು. ಜ್ಯೋತಿಬಾ ಪುಲೆ, ಸಾವಿತ್ರಿಬಾಯಿ ಪುಲೆ, ಶಾಹೂ ಮಹಾರಾಜರು, ಅಂಬೇಡ್ಕರ್, ದಯಾನಂದ ಸರಸ್ವತಿ ಮುಂತಾದವರ ಪ್ರೇರಣೆಯಿಂದ ಅಸ್ಪೃಶ್ಯತೆ ನಿವಾರಣೆ, ಮಹಿಳಾ ಶಿಕ್ಷಣ, ವಿಧವಾ ಮರುವಿವಾಹ, ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ಹೋರಾಟಗಳು ನಡೆದವು. ಕ್ರೈಸ್ತ ಮಿಷನರಿಗಳು ಶಿಕ್ಷಣದ ಪ್ರಚಾರದಲ್ಲಿ ಪ್ರಮುಖ ಪಾತ್ರವಹಿಸಿದರು. ಈ ಚಳುವಳಿಗಳು ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯದ ಬಯಕೆಗಳನ್ನು ಬಿತ್ತಿದವು. ಸಾಮಾಜಿಕ ಜಾಗೃತಿಯಿಂದ ರಾಷ್ಟ್ರೀಯ ಚಳುವಳಿಗೂ ಬಲ ಒದಗಿ ಬಂದಿತು. ಹೀಗಾಗಿ ವಸಾಹತುಶಾಹಿ ಕಾಲದ ಬಾಂಬೆ ಕರ್ನಾಟಕದ ಸಾಮಾಜಿಕ ಚಳುವಳಿಗಳು ಸಮಾಜ ಸುಧಾರಣೆಯೊಂದಿಗೆ ಸ್ವಾತಂತ್ರ್ಯ ಹೋರಾಟಕ್ಕೂ ಪ್ರೇರಣೆಯಾದವು.

## KEYWORDS:

ವಸಾಹತುಶಾಹಿ, ಬಾಂಬೆ ಕರ್ನಾಟಕ, ಸಾಮಾಜಿಕ, ಶಿಕ್ಷಣ, ಚಳುವಳಿಗಳು

### ಪ್ರಸ್ತಾವನೆ:

ಭಾರತದಲ್ಲಿ ವಸಾಹತುಶಾಹಿ ಆಳ್ವಿಕೆ 18 ನೇ ಶತಮಾನದಿಂದ 20 ನೇ ಶತಮಾನದ ಮಧ್ಯಭಾಗದವರೆಗೆ ಸುದೀರ್ಘಕಾಲ ಮುಂದುವರೆಯಿತು. ಈ ಅವಧಿಯಲ್ಲಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆಗಳು ಸಂಭವಿಸಿದವು. ವಿಶೇಷವಾಗಿ ಬಾಂಬೆ ಪ್ರೆಸಿಡೆನ್ಸಿಗೆ ಸೇರಿದ್ದ ಬಾಂಬೆ ಕರ್ನಾಟಕ ಪ್ರದೇಶಗಳಲ್ಲಿ (ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಬಾಗಲಕೋಟೆ, ಗದಗ, ಕಾರವಾರ ಇತ್ಯಾದಿ) ಸಾಮಾಜಿಕ ಚಳುವಳಿಗೆ ಮಹತ್ವದ ಸ್ಥಾನ ಪಡೆದುಕೊಂಡವು. ಈ ಚಳುವಳಿಗಳ ಉದ್ದೇಶ ಸಮಾಜದಲ್ಲಿದ್ದ ಅಸಮಾನತೆ, ಜಾತಿಯತೆ, ಅಸ್ಪೃಶ್ಯತೆ, ಮಹಿಳೆಯರ ಮೇಲಿನ ಅನ್ಯಾಯ, ದೌರ್ಜನ್ಯ, ಅಂಧಶ್ರದ್ಧೆ ಹಾಗೂ ಹಿಂದುಳಿದ ವರ್ಗಗಳ ಶೋಷಣೆಯನ್ನು ನಿರ್ಮೂಲನೆಗೊಳಿಸುವುದಾಗಿತ್ತು. ಆಧುನಿಕ ಶಿಕ್ಷಣ, ಸುಧಾರಣಾ ಚಿಂತನೆಗಳ ಬೆಳವಣಿಗೆ ಹಾಗೂ ಸುಧಾರಕರ ಹೋರಾಟದಿಂದ ಬಾಂಬೆ ಕರ್ನಾಟಕದಲ್ಲಿ ಸಮಾಜದ ಬದಲಾವಣೆಯ ಚಳುವಳಿಗಳು ತೀವ್ರ ಸ್ವರೂಪ ಪಡೆದುಕೊಂಡವು.

### ಸಾಮಾಜಿಕ ಚಳುವಳಿಗಳು:

ಬ್ರಿಟಿಷರ ವಸಾಹತುಶಾಹಿ ಆಳ್ವಿಕೆಯಲ್ಲಿ ಬಾಂಬೆ ಕರ್ನಾಟಕ ಸಾಮಾಜಿಕ, ಧಾರ್ಮಿಕ

ಹಾಗೂ ರಾಜಕೀಯ ಬದಲಾವಣೆಗಳಿಗೆ ಸಾಕ್ಷಿಯಾದ ಪ್ರದೇಶವಾಗಿದೆ. ವಿಶೇಷವಾಗಿ 19 ಮತ್ತು 20 ನೇ ಶತಮಾನಗಳಲ್ಲಿ ಈ ಭಾಗದಲ್ಲಿ ಹಲವು ಸಾಮಾಜಿಕ ಚಳುವಳಿಗಳು ಉಂಟಾದವು. ಇವು ಜನರಲ್ಲಿ ಜಾಗೃತಿ ಮೂಡಿಸಿ ಸಮಾನತೆ, ಶಿಕ್ಷಣ, ಮಹಿಳಾ ಹಕ್ಕುಗಳು, ಅಸ್ಪೃಶ್ಯತೆ ನಿರ್ಮೂಲನೆ ಮತ್ತು ರಾಷ್ಟ್ರೀಯ ಚಿಂತನೆಗೆ ದಾರಿ ಮಾಡಿಕೊಟ್ಟವು.

**1. ಪ್ರಾರ್ಥನಾ ಸಮಾಜ:**

1869 ರಲ್ಲಿ ಡಾ. ಆತ್ಮಾರಾಮ ಪಾಂಡುರಂಗ, ಮಹಾದೇವ ಗೋವಿಂದ ರಾನಡೆ ನೇತೃತ್ವದಲ್ಲಿ ಬಾಂಬೆ (ಮುಂಬೈ) ಯಲ್ಲಿ ಪ್ರಾರ್ಥನಾ ಸಮಾಜವೆಂಬ ಸಂಘಟನೆಯನ್ನು ಹುಟ್ಟು ಹಾಕಿದರು.

**ಪ್ರಾರ್ಥನಾ ಸಮಾಜದ ಕೊಡುಗೆಗಳು:**

**ಧಾರ್ಮಿಕ ಸುಧಾರಣೆಗಳು:**

- ಏಕದೇವತೆಯ ಆರಾಧನೆಗೆ ಒತ್ತು ನೀಡಿತು.
- ಬಹು ದೇವತಾ ಆರಾಧನೆ, ಅಂಧಶ್ರದ್ಧೆ, ಮೂಢನಂಬಿಕೆ ನಿರ್ಮೂಲನೆಗೆ ಪ್ರಯತ್ನಿಸಿತು.
- ಎಲ್ಲ ಧರ್ಮಗಳನ್ನು ಗೌರವಿಸಿತು.
- ಪ್ರತಿಯೊಂದು ಧರ್ಮವು ಸತ್ಯದ ಪ್ರತೀಕವೆಂದು ಸಾರಿತು.

**ಸಾಮಾಜಿಕ ಸುಧಾರಣೆ:**

- ಬಾಲ್ಯ ವಿವಾಹ ನಿಷೇಧ, ವಿಧವಾ ವಿವಾಹ, ಅಂತರಜಾತಿ ವಿವಾಹ, ಸಹಭೋಜನ, ಸ್ತ್ರೀ ವಿಮೋಚನೆ, ಅಸ್ಪೃಶ್ಯ ಉದ್ಧಾರ, ಸ್ತ್ರೀ ಶಿಕ್ಷಣ, ಪರ್ದಾ ಪದ್ಧತಿ ನಿರ್ಮೂಲನೆ, ಶೋಷಿತ ವರ್ಗಗಳಿಗೆ ಸಮಾಜದಲ್ಲಿ ಮಾನವೀಯ ಸ್ಥಾನ ಕಲ್ಪಿಸಲು ಪ್ರಯತ್ನಿಸಿತು.

**ಬಾಂಬೆ ಕರ್ನಾಟಕದ ಮೇಲೆ ಪ್ರಭಾವ:**

- ಧಾರವಾಡ, ಬೆಳಗಾವಿ, ಹುಬ್ಬಳ್ಳಿ, ವಿಜಯಪುರ ಪ್ರದೇಶಗಳಲ್ಲಿ ಪ್ರಾರ್ಥನಾ ಸಮಾಜದ ಶಾಖೆಗಳು ಸ್ಥಾಪನೆಯಾದವು.
- ಪ್ರಾರ್ಥನಾ ಸಮಾಜವು ಶಿಕ್ಷಣ ಪ್ರಸಾರಕ್ಕೆ ಹೆಚ್ಚಿನ ಆದ್ಯತೆ ನೀಡಿತು.
- ಅನಾಥಾಲಯಗಳನ್ನು, ಸಂಜೆ ಶಾಲೆಗಳನ್ನು ಸ್ಥಾಪಿಸಿದರು.

**ವಸಾಹತುಶಾಹಿ ಕಾಲದ ಬಾಂಬೆ ಕರ್ನಾಟಕದಲ್ಲಿ ಆರ್ಯ ಸಮಾಜದ ಸಾಮಾಜಿಕ ಚಳುವಳಿಗಳು:**

ಬಾಂಬೆ ಕರ್ನಾಟಕದಲ್ಲಿ 19 ನೇ ಶತಮಾನದಲ್ಲಿ ಬ್ರಹ್ಮ ಸಮಾಜ, ಪ್ರಾರ್ಥನಾ ಸಮಾಜಗಳ ಜೊತೆಗೆ ಆರ್ಯ ಸಮಾಜವು ಸಹ ಪ್ರಮುಖ ಸಾಮಾಜಿಕ – ಧಾರ್ಮಿಕ ಚಳುವಳಿಯಾಗಿದೆ. ದಯಾನಂದ ಸರಸ್ವತಿಯವರಿಂದ 1875 ರಲ್ಲಿ ಸ್ಥಾಪನೆಯಾದ ಆರ್ಯ ಸಮಾಜವು “ವೇದಗಳಿಗೆ ಹಿಂದಿರುಗಿ” ಎಂಬ ತತ್ವಗಳನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ ಸುಧಾರಣೆಗೆ ಶ್ರಮಿಸಿತು.

**ಬಾಂಬೆ ಕರ್ನಾಟಕದಲ್ಲಿ ಪ್ರಮುಖ ಸಾಮಾಜಿಕ ಚಳುವಳಿಗಳು:**

- ವೇದಗಳೇ ಸತ್ಯ ಜ್ಞಾನ, ಉಳಿದವು ಅಂಧಶ್ರದ್ಧೆ ಎಂಬ ಬೋಧನೆ ನೀಡಿತು.
- ಬಾಂಬೆ ಕರ್ನಾಟಕದಲ್ಲಿ ವಿದ್ಯಾವಂತರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಿತು.

- ಮೂಢನಂಬಿಕೆ, ಕರ್ಮಕಾಂಡ, ಯಜ್ಞ ಹವನಗಳ ವ್ಯಾಪಕ ಖರ್ಚು, ತೀರ್ಥ ಪ್ರಯಾಣಗಳ ಅತಿಯಾದ ಒತ್ತಡಗಳನ್ನು ವಿರೋಧಿಸಿತು.
- ಬಹು ದೇವತಾ ಆರಾಧನೆ ವಿರೋಧಿಸಿ ಏಕೇಶ್ವರ ಭಕ್ತಿಗೆ ಒತ್ತು ನೀಡಿತು.
- ಬಾಲಕ– ಬಾಲಕಿಯರಿಗೆ ಸಮಾನ ಶಿಕ್ಷಣ ನೀಡುವುದರ ಕಡೆಗೆ ಗಮನ ಹರಿಸಿತು.
- ದಾವಣಗೇರಿ, ಹಾವೇರಿ, ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಆರ್ಯ ಸಮಾಜದ ಶಾಲೆಗಳು ಸ್ಥಾಪಿಸಲ್ಪಟ್ಟವು.
- ಬಾಲ್ಯ ವಿವಾಹದ ವಿರುದ್ಧವಾಗಿ, ವಿಧವೆಯರಿಗೆ ಪುನರ್ವಿವಾಹಕ್ಕೆ ಉತ್ತೇಜನ ನೀಡಿತು.
- ಶುದ್ಧಿ ಚಳುವಳಿ (ಹಿಂದೂ ಧರ್ಮ ತೊರೆದು ಹೋಗುವವರನ್ನು ಹಿಂದೂ ಧರ್ಮಕ್ಕೆ ಮರು ಪ್ರವೇಶಗೊಳಿಸುವುದು) ಪ್ರಚಾರಗೊಳಿಸಿತು.
- ಮಹಿಳೆಯರ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಿತು.
- ಜಾತಿ ಆಧಾರಿತ ಭೇದ ಭಾವವನ್ನು ವಿರೋಧಿಸಿ ಸಮಾನತೆಯ ಸಮಾಜಕ್ಕಾಗಿ ಹೋರಾಟ ಮಾಡಿತು.
- ಬ್ರಿಟಿಷರ ಕಾಲದಲ್ಲಿ ಜನರಲ್ಲಿ ಸ್ವಾಭಿಮಾನ ಮತ್ತು ದೇಶಪ್ರೇಮ ಬೆಳೆಸುವ ಕೆಲಸ ಮಾಡಿತು.
- ಸ್ವದೇಶಿ ಚಳುವಳಿ ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಜನರನ್ನು ಪ್ರೇರೇಪಿಸಿತು.
- ಆಧುನಿಕ ಚಿಂತನೆ, ಪ್ರಗತಿಶೀಲತೆ ಮತ್ತು ರಾಷ್ಟ್ರಪ್ರೇಮ ಬೆಳೆಸಿದ ಮಹತ್ವದ ಚಳುವಳಿಯಾಗಿದೆ.

**ಜ್ಯೋತಿರಾವ್ ಪುಲೆ:**

ವಸಾಹತುಶಾಹಿ ಕಾಲದ ಬಾಂಬೆ ಕರ್ನಾಟಕದ ಸಾಮಾಜಿಕ ಚಳುವಳಿಗಳಲ್ಲಿ ಜ್ಯೋತಿರಾವ್ ಪುಲೆ ಅವರ ಪಾತ್ರ ಬಹಳ ಮುಖ್ಯವಾದುದು. ಜ್ಯೋತಿರಾವ್ ಪುಲೆ (1827–1890) ಮಹಾರಾಷ್ಟ್ರದಲ್ಲಿ ಸಾಮಾಜಿಕ ಸುಧಾರಣೆಯ ಪಿತಾಮಹರಾಗಿ ಪ್ರಸಿದ್ಧರು. ಅಸ್ಪೃಶ್ಯತೆ, ಜಾತಿ, ಅಸಮಾನತೆ, ಮಹಿಳೆಯರ ಶೋಷಣೆ ಇವುಗಳ ವಿರುದ್ಧ ಹೋರಾಟ ನಡೆಸಿದರು. ಅವರ ಚಿಂತನೆಗಳು ಹಾಗೂ ಚಳುವಳಿಗಳು ಬಾಂಬೆ ಕರ್ನಾಟಕದಲ್ಲಿ ಪ್ರಭಾವ ಬೀರಿದವು. ಪುಲೆ ಅವರು ಪುಣೆಯಲ್ಲಿ 1848 ರಲ್ಲಿ ಮೊದಲ ಮಹಿಳಾ ಶಾಲೆ ಪ್ರಾರಂಭಿಸಿದರು. ಅವರು ದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ಶಿಕ್ಷಣದ ಬಾಗಿಲು ತೆರೆದರು. ಬಾಂಬೆ ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ಅವರ ಶಿಷ್ಯರು ಹಾಗೂ ಅಭಿಮಾನಿಗಳು ಚಳುವಳಿಗಳನ್ನು ಪ್ರಾರಂಭಿಸಿದರು. ಪುಲೆ ಸ್ಥಾಪಿಸಿದ ಸತ್ಯ ಶೋಧಕ ಸಮಾಜವು ಜಾತಿ ಆಧಾರಿತ ಅನ್ಯಾಯ, ಪೂಜಾರಿ ವರ್ಗದ ಶೋಷಣೆ ಹಾಗೂ ಅಸ್ಪೃಶ್ಯತೆಯ ವಿರುದ್ಧ ಹೋರಾಟ ಮಾಡಿತು. ಬಾಂಬೆ ಕರ್ನಾಟಕದಲ್ಲಿ ಸತ್ಯಶೋಧಕ ಸಮಾಜದ ಚಿಂತನೆಗಳು ವ್ಯಾಪಕವಾಗಿ ಹರಡಿಕೊಂಡು ದಲಿತರ ಸ್ವಾಭಿಮಾನ ಚಳುವಳಿಗೆ ಪ್ರೇರಣೆ ನೀಡಿದವು. ಬಾಂಬೆ ಕರ್ನಾಟಕದಲ್ಲಿ ಮಹಿಳಾ ಶಿಕ್ಷಣ ಚಳುವಳಿಗೆ ಪುಲೆ ದಂಪತಿಗಳ ಆದರ್ಶ ಪ್ರೇರಣೆಯಾಗಿತ್ತು. ಜಾತಿ ನಿರ್ಮೂಲನೆಗೆ ಬಲವಾದ ಧ್ವನಿಯಾಗಿ ಬಾಂಬೆ ಕರ್ನಾಟಕದ ಹಿಂದುಳಿದ ಸಮಾಜಕ್ಕೆ ಆತ್ಮವಿಶ್ವಾಸವನ್ನು ತುಂಬಿದರು. ಸಮಾಜದ ಸಮಾನತೆ, ಮಹಿಳಾ ಶಿಕ್ಷಣ ಮತ್ತು ಶೋಷಿತರ ಹಕ್ಕುಗಳ ಪರ ಹೋರಾಟದ ಮೂಲಕ ಭವಿಷ್ಯದ ಸಾಮಾಜಿಕ ಚಳುವಳಿಗೆ ಬುನಾದಿ ಹಾಕಿದರು. ಜ್ಯೋತಿಬಾ ಪುಲೆ ಅವರ ಶಿಕ್ಷಣ, ಸತ್ಯಶೋಧಕ ಸಮಾಜವು, ಜಾತಿ ಸಮಾನತೆ ಹಾಗೂ ಮಹಿಳಾ

ಹಕ್ಕುಗಳ ವಿಚಾರಗಳು ಬಾಂಬೆ ಕರ್ನಾಟಕದ ಸಾಮಾಜಿಕ ಚಳುವಳಿಗಳನ್ನು ಪ್ರಭಾವಿತಗೊಳಿಸಿ ಹೊಸ ಸಮಾಜ ಜಾಗೃತಿಗೆ ದಾರಿಮಾಡಿಕೊಟ್ಟವು.

**ಸಾಮಾಜಿಕ ಸುಧಾರಣೆಯಲ್ಲಿ ಸಾವಿತ್ರಿಬಾಯಿ ಪುಲೆ ಅವರ ಪಾತ್ರ:**

ಸಾವಿತ್ರಿಬಾಯಿ ಪುಲೆ (1831–1897) ಅವರು ಭಾರತದಲ್ಲಿ ಮಹಿಳಾ ಶಿಕ್ಷಣ, ಅಸ್ಪೃಶ್ಯತೆ ವಿರೋಧ ಹಾಗೂ ಸಾಮಾಜಿಕ ಸಮಾನತೆಗಾಗಿ ಹೋರಾಡಿದ ಪ್ರಮುಖ ಸಮಾಜ ಸೇವಕಿ. ಮಹಾರಾಷ್ಟ್ರದ ಪುಣೆಯಲ್ಲಿ ಅವರು ಆರಂಭಿಸಿದ ಚಳುವಳಿ ಬಾಂಬೆ ಕರ್ನಾಟಕದಲ್ಲಿಯೂ ಪ್ರೇರಣೆ ನೀಡಿತು.

- ಜ್ಯೋತಿರಾವ್ ಪುಲೆ ಅವರೊಂದಿಗೆ 1848 ರಲ್ಲಿ ಪುಣೆಯಲ್ಲಿ ಹುಡುಗಿಯರಿಗೆ ಪ್ರಥಮ ಶಾಲೆಯನ್ನು ಆರಂಭಿಸಿದರು. ಈ ಕಾರ್ಯ ಬಾಂಬೆ ಕರ್ನಾಟಕದಲ್ಲಿ ಮಹಿಳಾ ಶಿಕ್ಷಣ ಚಳುವಳಿಗೆ ಆದರ್ಶವಾಯಿತು. ಧಾರವಾಡ, ಬೆಳಗಾವಿ, ಬಾಗಲಕೋಟೆ ಮುಂತಾದ ಸ್ಥಳಗಳಲ್ಲಿ ಸ್ಥಳೀಯ ನಾಯಕರು ಪುಲೆ ದಂಪತಿಗಳ ಮಾದರಿಯಲ್ಲಿ ಶಾಲೆಗಳನ್ನು ಪ್ರಾರಂಭಿಸಿದರು.
- ಜ್ಯೋತಿರಾವ್ ಮತ್ತು ಸಾವಿತ್ರಿಬಾಯಿ ಪುಲೆ ಸ್ಥಾಪಿಸಿದ ಸತ್ಯಶೋಧಕ ಸಮಾಜ ಬಾಂಬೆ ಕರ್ನಾಟಕಕ್ಕೂ ವಿಸ್ತರಿಸಿತು. ಅಸ್ಪೃಶ್ಯತೆ ವಿರೋಧ, ಧರ್ಮ ಸಮಾನತೆ, ಸಾಮಾಜಿಕ ನ್ಯಾಯದ ತತ್ವಗಳು ಇಲ್ಲಿ ಸುಧಾರಕರಲ್ಲಿ ಬೇರೂರಿದವು.
- ಧಾರವಾಡದ ಶಾಹಪುರ ಕೃಷ್ಣಶಾಸ್ತ್ರಿ, ಬೆಳಗಾವಿಯ ಗೋಪಾಲಗೌಡ, ಬಾಗಲಕೋಟೆಯ ಶರಣಬಸಪ್ಪ ಅಪ್ಪಯ್ಯಸ್ವಾಮಿ ಮುಂತಾದವರು ಸತ್ಯಶೋಧಕ ಚಳುವಳಿಯಿಂದ ಪ್ರೇರಿತರಾದರು.
- ಸಾವಿತ್ರಿಬಾಯಿ ಅಸ್ಪೃಶ್ಯರ ಮಕ್ಕಳಿಗೂ ಶಾಲೆ ತೆರೆದಿದ್ದು ಬಾಂಬೆ ಕರ್ನಾಟಕದಲ್ಲಿ ಹಿಂದುಳಿದ ಸಮುದಾಯಗಳಿಗೂ ದಾರಿ ತೋರಿಸಿತು.
- ಈ ಪ್ರೇರಣೆಯಿಂದ ಅಸ್ಪೃಶ್ಯ ಸಮುದಾಯದ ನಾಯಕರಾದ ಗೋಪಾಲಗೌಡ ತಮ್ಮ ಊರಿನಲ್ಲಿ ಶಾಲೆ ತೆರೆದು ಸಮಾನತೆಯ ಹೋರಾಟಕ್ಕೆ ನಿಂತರು.
- ಸಾವಿತ್ರಿಬಾಯಿ ವಿಧವೆಯರ ಪುನರ್ವಿವಾಹ ಹಾಗೂ ಗರ್ಭಿಣಿ ವಿಧವೆಯರಿಗೆ ಆಶ್ರಯ ನೀಡಿದ ಮಾದರಿ ಬಾಂಬೆ ಕರ್ನಾಟಕದಲ್ಲಿಯೂ ಪ್ರಭಾವ ಬೀರಿತು.
- ಧಾರವಾಡ, ಬೆಳಗಾವಿಯ ಸುಧಾರಕರು ವಿಧವಾ ವಿವಾಹಗಳನ್ನು ಸಮರ್ಥಿಸಿದರು.
- ಸಾವಿತ್ರಿಬಾಯಿ ಬರೆದ ಕವಿತೆಗಳು ಶಿಕ್ಷಣ, ಸಮಾನತೆ ಮತ್ತು ಶೋಷಿತ ಮಹಿಳೆಯರ ಧ್ವನಿಯಾಗಿ ಪರಿಣಮಿಸಿದವು. ಈ ಸಾಹಿತ್ಯ ಬಾಂಬೆ ಕರ್ನಾಟಕದಲ್ಲಿ ಸುಧಾರಕರಲ್ಲಿ ಸಾಮಾಜಿಕ ಜಾಗೃತಿ ಮೂಡಿಸಿತು. ಸಾವಿತ್ರಿಬಾಯಿ ಹೋರಾಟದ ಮಾದರಿ ಬಾಂಬೆ ಕರ್ನಾಟಕದ ಸುಧಾರಕರಿಗೆ ಧೈರ್ಯ ತುಂಬಿತು. ಸಾವಿತ್ರಿಬಾಯಿ ಪುಲೆ ಅವರು ವಸಾಹತುಶಾಹಿ ಕಾಲದ ಮಹಿಳಾ ಶಿಕ್ಷಣ, ಅಸ್ಪೃಶ್ಯರ ಮುಕ್ತಿ ಹಾಗೂ ಸಮಾನತೆಯ ಹೋರಾಟದಲ್ಲಿ ದಿಕ್ಕು ತೋರಿಸಿದ ದೀಪಸ್ತಂಭರಾಗಿದ್ದರು. ಅವರ ಚಳುವಳಿ ನೇರವಾಗಿ ಪುಣೆಯಲ್ಲಿ ನಡೆದರೂ ಅದರ ಪರಿಣಾಮ ಬಾಂಬೆ ಕರ್ನಾಟಕದಲ್ಲಿಯೂ ಸಮಾಜ ಸುಧಾರಕರಿಗೆ ಪ್ರೇರಣೆ ನೀಡಿ ಸಾಮಾಜಿಕ ಚಳುವಳಿಗಳನ್ನು ಬಲಪಡಿಸಿತು.

**ಕೊಲ್ಲಾಪುರದ ಶಾಹು ಮಹಾರಾಜ (1874–1922):**

ಛತ್ರಪತಿ ಶಾಹು ಮಹಾರಾಜ್ ವಿಶೇಷವಾಗಿ ಪಶ್ಚಿಮ ಮಹಾರಾಷ್ಟ್ರದಲ್ಲಿ ಗೌರವಾನ್ವಿತ

ಹೆಸರು. ಅವರು ತಮ್ಮ ರಾಜ್ಯದಲ್ಲಿ ಶಿಕ್ಷಣದಲ್ಲಿ ಹಿಂದುಳಿದವರಿಗೆ ಮೀಸಲಾತಿಯನ್ನು ಪರಿಚಯಿಸಿದರು. ಡಾ. ಬಿ. ಆರ್. ಅಂಬೇಡ್ಕರ್ ಅವರ ವೃತ್ತಿ ಜೀವನದಲ್ಲಿ ಸಹಾಯ ಮಾಡಿದರು. ಹಿಂದುಳಿದ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳನ್ನು ಸ್ಥಾಪಿಸಿದರು ಮತ್ತು ರಾಜ್ಯದಲ್ಲಿ ಶಿಕ್ಷಣ ಹರಡಲು ಸಹಾಯ ಮಾಡಿದರು. ರಾಜರ್ಷಿ ಶಾಹು ಎಂದು ಕರೆಯಲ್ಪಡುವ ಶಾಹು ಮಹಾರಾಜ್ ಅವರನ್ನು ನಿಜವಾದ ಪ್ರಜಾಪ್ರಭುತ್ವವಾದಿ ಮತ್ತು ಸಮಾಜ ಸುಧಾರಕ ಎಂದು ಪರಿಗಣಿಸಲಾಗಿತ್ತು. ಮಹಾರಾಷ್ಟ್ರದ ಇತಿಹಾಸದಲ್ಲಿ ಅಮೂಲ್ಯ ರತ್ನವಾಗಿದ್ದರು. ಸಮಾಜ ಸುಧಾರಕ ಜ್ಯೋತಿಬಾ ಫುಲೆಯವರ ಕೊಡುಗೆಗಳಿಂದ ಹೆಚ್ಚು ಪ್ರಭಾವಿತರಾದ ಶಾಹು ಮಹಾರಾಜರು ಒಬ್ಬ ಆದರ್ಶ ನಾಯಕ ಮತ್ತು ಸಮರ್ಥ ಆಡಳಿತಗಾರರು ಆಗಿದ್ದರು. ಅವರು ತಮ್ಮ ಆಳ್ವಿಕೆಯಲ್ಲಿ ಅನೇಕ ಪ್ರಗತಿಪರ ಕಾರ್ಯಗಳನ್ನು ಮಾಡಿದರು. ರಾಜ್ಯದ ಕೆಳ ಜಾತಿಯ ಪ್ರಜೆಗಳ ಪರವಾಗಿ ಅವಿಶ್ರಾಂತವಾಗಿ ಶ್ರಮಿಸಿದರು. ಜಾತಿ ಧರ್ಮವನ್ನು ಲೆಕ್ಕಿಸದೇ ಎಲ್ಲರಿಗೂ ಪ್ರಾಥಮಿಕ ಶಿಕ್ಷಣವು ಅವರ ಅತ್ಯಂತ ಮಹತ್ವದ ಆದ್ಯತೆಗಳಲ್ಲಿ ಒಂದಾಗಿತ್ತು.

ಛತ್ರಪತಿ ಶಾಹು ಮಹಾರಾಜರು 1894 ರಿಂದ 1922 ರ ವರೆಗೆ 28 ವರ್ಷಗಳ ಕಾಲ ಕೊಲ್ಲಾಪುರದ ಸಿಂಹಾಸನವನ್ನು ಆಳಿದರು. ಈ ಅವಧಿಯಲ್ಲಿ ಅವರು ತಮ್ಮ ಸಾಮ್ರಾಜ್ಯದಲ್ಲಿ ಹಲವಾರು ಸಾಮಾಜಿಕ ಸುಧಾರಣೆಗಳನ್ನು ಪ್ರಾರಂಭಿಸಿದರು.

- ಶಿಕ್ಷಣವನ್ನು ಜನಸಾಮಾನ್ಯರಿಗೆ ಲಭ್ಯವಾಗುವಂತೆ ಮಾಡುವುದು, ತಮ್ಮ ಪ್ರಜೆಗಳಲ್ಲಿ ಶಿಕ್ಷಣವನ್ನು ಉತ್ತೇಜಿಸಲು ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಪರಿಚಯಿಸಿದರು. ಅವರು ಪಾಂಚಾಲರು, ದೇವದನ್ಯಾ, ನಾಭಿಕ್, ಶಿಂಪಿ, ಧೋರ್, ಚಮ್ಮಾರ್ ಸಮುದಾಯಗಳಂತಹ ವಿವಿಧ ಜನಾಂಗಗಳು ಮತ್ತು ಧರ್ಮಗಳಿಗೆ ಹಾಗೂ ಮುಸ್ಲಿಮರು, ಜೈನರು ಮತ್ತು ಕ್ರಿಶ್ಚಿಯನ್ನರಿಗೆ ಪ್ರತ್ಯೇಕವಾಗಿ ಹಾಸ್ಟೆಲ್‌ಗಳನ್ನು ಸ್ಥಾಪಿಸಿದರು.
- ಶಾಹು ಮಹಾರಾಜರು ಅಸ್ಪೃಶ್ಯರ ವಿರುದ್ಧದ ಸಾಮಾಜಿಕ ಅನ್ಯಾಯವನ್ನು ಕಡಿಮೆ ಮಾಡಲು ಶ್ರಮಿಸಿದರು.
- ದೇವಸ್ಥಾನ ಪ್ರವೇಶ, ಸಾರ್ವಜನಿಕ ಬಾವಿ, ಕೊಳಗಳ ಬಳಕೆ, ಶಾಲಾ ಪ್ರವೇಶ ಇವುಗಳಲ್ಲಿ ಅಸ್ಪೃಶ್ಯರಿಗೆ ಹಕ್ಕು ನೀಡಿದರು.
- ಹಿಂದುಳಿದ ಮಕ್ಕಳಿಗೆ ಉಚಿತ ಶಿಕ್ಷಣ, ವಿದ್ಯಾರ್ಥಿವೇತನ ಹಾಗೂ ವಸತಿಗೃಹಗಳನ್ನು ಆರಂಭಿಸಿ ಹಿಂದುಳಿದ ವರ್ಗದವರಿಗೆ ಶಿಕ್ಷಣದಲ್ಲಿ ಉತ್ತೇಜನ ನೀಡಿದರು.
- ಸತ್ಯಶೋಧಕ ಸಮಾಜದ ತತ್ವಗಳನ್ನು ಬೆಂಬಲಿಸಿದರು.
- ಮಹಿಳೆಯರಿಗೆ ಶಿಕ್ಷಣ, ಬಾಲ್ಯ ವಿವಾಹ ನಿಷೇಧ, ವಿಧವೆಯರ ಪುನರ್ವಿವಾಹಕ್ಕೆ ಬೆಂಬಲ ನೀಡಿದರು.
- ಸರ್ಕಾರಿ ಉದ್ಯೋಗಗಳು ಹಾಗೂ ಶಿಕ್ಷಣದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ವ್ಯವಸ್ಥೆ ಜಾರಿಗೆ ತಂದರು.
- ಶಾಹು ಮಹಾರಾಜರು ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ ಫುಲೆ, ಡಾ. ಬಿ. ಆರ್. ಅಂಬೇಡ್ಕರ್ ಮೊದಲಾದ ನಾಯಕರ ಚಿಂತನೆಗಳಿಗೆ ಪೋಷಕರಾದರು.
- ಬಾಂಬೆ ಕರ್ನಾಟಕದಲ್ಲಿ ಸಮಾನತೆ ಚಳುವಳಿಗೆ ಬುನಾದಿ ಹಾಕಿದರು. ಹಿಂದುಳಿದ ವರ್ಗದ ಚಳುವಳಿಗೆ ಆರ್ಥಿಕ, ನೈತಿಕ ಬೆಂಬಲ ನೀಡಿದರು. ಬೌದ್ಧಿಕ ಜಾಗೃತಿ

ಮೂಡಿಸಿದರು.

**ಡಾ. ಬಿ. ಆರ್. ಅಂಬೇಡ್ಕರ್:**

ಡಾ. ಬಿ. ಆರ್. ಅಂಬೇಡ್ಕರ್ (1891–1956) ಅವರು ಭಾರತದ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಅಸ್ಪೃಶ್ಯತೆಯ ನಿವಾರಣೆಗೆ ಜೀವನವನ್ನು ಅರ್ಪಿಸಿದ ಮಹಾನ್ ಚಿಂತಕರಾಗಿದ್ದರು. ವಸಾಹತುಶಾಹಿ ಕಾಲದ ಬಾಂಬೆ ಕರ್ನಾಟಕ ಪ್ರದೇಶದಲ್ಲಿ ಅವರ ಆಲೋಚನೆಗಳು ಹಾಗೂ ಚಟುವಟಿಕೆಗಳು ಹಿಂದುಳಿದ ವರ್ಗಗಳಿಗೆ ಜಾಗೃತಿ ಮೂಡಿಸಿದವು ಮತ್ತು ಸಾಮಾಜಿಕ ಚಳುವಳಿಗಳಿಗೆ ಶಕ್ತಿಯನ್ನು ತುಂಬಿದವು.

**1. ಅಸ್ಪೃಶ್ಯತೆ ವಿರುದ್ಧ ಹೋರಾಟ:**

ಡಾ. ಬಿ. ಆರ್. ಅಂಬೇಡ್ಕರ್ ಬಾಲ್ಯದಲ್ಲೇ ಅಸ್ಪೃಶ್ಯತೆ ಅನುಭವಿಸಿದ್ದರಿಂದ ಅದನ್ನು ನಿವಾರಿಸಲು ಬದ್ಧರಾಗಿದ್ದರು. ಬಾಂಬೆ ಕರ್ನಾಟಕದ ಅಸ್ಪೃಶ್ಯರು ದೇವಾಲಯ, ಶಾಲೆ, ಬಾವಿಗಳು ಮುಂತಾದಲ್ಲಿ ಅನುಭವಿಸುತ್ತಿದ್ದ ನಿಷೇಧಗಳ ವಿರುದ್ಧ ಅಂಬೇಡ್ಕರ್ ಗಟ್ಟಿಯಾಗಿ ಹೋರಾಟ ನಡೆಸಿದರು. 1927 ರಲ್ಲಿ ಮಹಾಡ್ ಕೆರೆಯ ಸತ್ಯಾಗ್ರಹವು ಅಸ್ಪೃಶ್ಯರಿಗೆ ನೀರು ಕುಡಿಯುವ ಹಕ್ಕಿಗಾಗಿ ನಡೆಸಿದ ಮೊದಲ ಸಾಮಾಜಿಕ ಚಳುವಳಿಯಾಗಿ ಪ್ರಖ್ಯಾತಿ ಪಡೆದಿತ್ತು. ಇದರ ಪರಿಣಾಮ ಬಾಂಬೆ ಕರ್ನಾಟಕದಲ್ಲಿಯೂ ದಲಿತರು ಧೈರ್ಯವಾಗಿ ಸಾಮಾಜಿಕ ಹಕ್ಕುಗಳನ್ನು ಬೇಡಲು ಪ್ರಾರಂಭಿಸಿದರು.

**2. ಶಿಕ್ಷಣ ಪ್ರಚಾರ:**

- "ಶಿಕ್ಷಣ ಪಡೆಯಿರಿ, ಸಂಘಟಿತರಾಗಿ, ಹೋರಾಟ ಮಾಡಿ" ಎಂಬ ಅಂಬೇಡ್ಕರ್ ಘೋಷಣೆಯು ಬಾಂಬೆ ಕರ್ನಾಟಕದ ಹಿಂದುಳಿದ ವರ್ಗಗಳ ಚಳುವಳಿಗೆ ಮಾರ್ಗದರ್ಶನ ನೀಡಿತು.
- ದಲಿತರಿಗಾಗಿ ಶಾಲೆಗಳು, ವಸತಿಗೃಹಗಳು ಸ್ಥಾಪಿಸಲು ಮತ್ತು ವಿದ್ಯಾರ್ಥಿವೇತನ ಪಡೆಯಲು ಅವರು ಬದ್ಧರಾಗಿದ್ದರು. ಶಿಕ್ಷಣವನ್ನು ಸಮಾಜ ಸುಧಾರಣೆಯ ಅಸ್ತ್ರವಾಗಿ ಬಳಸಿದರು.

**3. ಸಂಘಟನೆ ಮತ್ತು ನಾಯಕತ್ವ:**

1924 ರಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಸ್ಥಾಪಿಸಿದ 'ಬಹಿಷ್ಕೃತ ಹಿತಕಾರಿಣಿ ಸಭೆ' ಅಸ್ಪೃಶ್ಯರ ಹಕ್ಕುಗಳಿಗಾಗಿ ಪ್ರಮುಖ ವೇದಿಕೆಯಾಗಿತ್ತು. ಈ ಸಂಘಟನೆಯ ಚಟುವಟಿಕೆಗಳು ಬಾಂಬೆ ಕರ್ನಾಟಕದಲ್ಲಿಯೂ ವ್ಯಾಪಿಸಿ ಅಸ್ಪೃಶ್ಯರಲ್ಲಿ ರಾಜಕೀಯ – ಸಾಮಾಜಿಕ ಚೇತನ ಮೂಡಿಸಿತು ಮತ್ತು ದಲಿತರನ್ನು ಸಂಘಟಿಸಿ ಸಾಮಾಜಿಕ ಸುಧಾರಣೆಗೆ ಒಗ್ಗೂಡಿಸಿದರು.

**4. ರಾಜಕೀಯ ಹೋರಾಟ:**

- ಡಾ. ಬಿ. ಆರ್. ಅಂಬೇಡ್ಕರ್ ಬಾಂಬೆ ವಿಧಾನಸಭೆ ಮತ್ತು ಕೇಂದ್ರ ವಿಧಾನಸಭೆಯಲ್ಲಿ ಹಿಂದುಳಿದ ವರ್ಗಗಳ ಪರವಾಗಿ ಧ್ವನಿ ಎತ್ತಿದ್ದರು.
- ಸೈಮನ್ ಆಯೋಗ (1928), ದುಂಡು ಮೇಜಿನ ಸಮ್ಮೇಳನ (1930–32) ಗಳಲ್ಲಿ ದಲಿತರ ಪರವಾಗಿ ತಮ್ಮ ಅಭಿಪ್ರಾಯ ಮಂಡಿಸಿದರು.
- ಪುಣೆ ಒಪ್ಪಂದ (1932) ಮೂಲಕ ದಲಿತರ ರಾಜಕೀಯ ಪ್ರತಿನಿಧಿತ್ವವನ್ನು ಖಚಿತಪಡಿಸಿದರು. ಇದರ ಪ್ರಭಾವ ಬಾಂಬೆ ಕರ್ನಾಟಕದಲ್ಲಿಯೂ ತೀವ್ರವಾಗಿ

ಅನುಭವಿಸಲಾಯಿತು.

**5. ಧಾರ್ಮಿಕ ಪರಿವರ್ತನೆ:**

ಡಾ. ಬಿ. ಆರ್. ಅಂಬೇಡ್ಕರ್ ಅವರು ಹಿಂದೂ ಸಮಾಜದಲ್ಲಿ ಸಮಾನತೆ ಸಾಧ್ಯವಿಲ್ಲವೆಂದು ತೀರ್ಮಾನಿಸಿ ಬೌದ್ಧ ಧರ್ಮ ಸ್ವೀಕರಿಸಿದರು. ಅವರ ಬೌದ್ಧ ಧರ್ಮ ಸ್ವೀಕಾರ (1956) ಬಾಂಬೆ ಕರ್ನಾಟಕದ ದಲಿತರಿಗೂ ಹೊಸ ದಾರಿದೀಪವಾಯಿತು. ಧರ್ಮ ಪರಿವರ್ತನೆಯ ಮೂಲಕ ಅಸ್ಪೃಶ್ಯರಿಗೆ ಮಾನವೀಯ ಗೌರವ ದೊರೆಯಬಹುದು ಎಂಬ ಅರಿವು ಮೂಡಿತು.

**6. ಬಾಂಬೆ ಕರ್ನಾಟಕದ ಮೇಲೆ ಪ್ರಭಾವ:**

ಅಂಬೇಡ್ಕರ್ ಅವರ ಚಳುವಳಿಯಿಂದ ಬಾಂಬೆ ಕರ್ನಾಟಕದ ದಲಿತರಲ್ಲಿ ಆತ್ಮಗೌರವ, ಹಕ್ಕುಗಳ ಅರಿವು ಮತ್ತು ಸಂಘಟನೆಯ ಶಕ್ತಿ ಬೆಳೆಯಿತು. ಅವರ ಚಿಂತನೆಗಳಿಂದ ಪ್ರೇರಿಪಿತವಾಗಿ ಹಿಂದುಳಿದ ವರ್ಗಗಳಲ್ಲಿ ಸಮಾಜ ಸುಧಾರಣಾ ಸಂಘಗಳು, ವಿದ್ಯಾರ್ಥಿ ಚಳುವಳಿಗಳು ಹುಟ್ಟಿಕೊಂಡವು. ಅಂಬೇಡ್ಕರ್ ಅವರ ಆಲೋಚನೆಗಳು ಶಾಹು ಮಹಾರಾಜರ ಸುಧಾರಣೆಗೆ ಪೂರಕವಾಗಿ ಕಾರ್ಯ ನಿರ್ವಹಿಸಿದವು.

**ಸಮಾರೋಪ:**

ವಸಾಹತುಶಾಹಿ ಕಾಲದ ಬಾಂಬೆ ಕರ್ನಾಟಕವು ಸಾಮಾಜಿಕ– ಸಾಂಸ್ಕೃತಿಕ ಪರಿವರ್ತನೆಗಳ ವೇದಿಕೆಯಾಗಿತ್ತು. ಪ್ರಾರ್ಥನಾ ಸಮಾಜ, ಆರ್ಯ ಸಮಾಜ, ಜ್ಯೋತಿಬಾ ಪುಲೆ, ಸಾವಿತ್ರಿಬಾಯಿ ಪುಲೆ, ಶಾಹು ಮಹಾರಾಜರು, ಡಾ. ಬಿ. ಆರ್. ಅಂಬೇಡ್ಕರ್ ಸೇರಿದಂತೆ ಹಲವಾರು ಚಿಂತಕರು ಮತ್ತು ಸಂಘಟಕರು ಸಮಾಜದಲ್ಲಿ ಶತಮಾನಗಳಿಂದ ನೆಲೆಸಿದ್ದ ಜಾತ್ಯತೀತ ಭೇದಭಾವ, ಅಸ್ಪೃಶ್ಯತೆ ವಿರುದ್ಧ ಚಳುವಳಿಗಳನ್ನು ಪ್ರಾರಂಭಿಸಿ ಹಿಂದುಳಿದ ವರ್ಗಗಳಿಗೆ ಮಾನವೀಯ ಹಕ್ಕುಗಳು, ಸಮಾನತೆ, ನ್ಯಾಯ ಮತ್ತು ಪ್ರಗತಿಗೆ ಬುನಾದಿ ಹಾಕಿದರು. ''ಶಿಕ್ಷಣವೇ ಶಕ್ತಿ'' ಎಂಬ ತತ್ವವನ್ನು ಅನುಸರಿಸಿದರು. ಸಾವಿತ್ರಿಬಾಯಿ ಪುಲೆ ಮತ್ತು ಶಾಹು ಮಹಾರಾಜರ ಪ್ರೋತ್ಸಾಹದಿಂದ ಮಹಿಳೆಯರು ಶಾಲೆಗೆ ಹೋಗಲು ಪ್ರಾರಂಭಿಸಿದರು. ವಿಧವಾ ಪುನರ್ವಿವಾಹ, ಬಾಲ್ಯ ವಿವಾಹ ನಿಷೇಧ ಮತ್ತು ರಾಜಕೀಯ ಪ್ರಾತಿನಿಧ್ಯತೆ, ಧಾರ್ಮಿಕ ಹಾಗೂ ಬೌದ್ಧಿಕ ಚಿಂತನೆಗಳು, ಸ್ವಾಭಿಮಾನ, ಹೋರಾಟ, ಶಿಕ್ಷಣ, ಸಮಾನತೆ, ಹಕ್ಕುಗಳ ಅರಿವು, ಸಾಮಾಜಿಕ ನ್ಯಾಯ ಮುಂತಾದ ಸಾಮಾಜಿಕ ಚಳುವಳಿಗಳು ಬಾಂಬೆ ಕರ್ನಾಟಕದಲ್ಲಿ ಕ್ರಾಂತಿ ಮೂಡಿಸಿ ಅದು ಭಾರತೀಯ ಸಮಾಜ ಸುಧಾರಣಾ ಇತಿಹಾಸದಲ್ಲಿ ಅಳಿಸಲಾಗದ ಹೆಜ್ಜೆ ಗುರುತುಗಳನ್ನು ಬಿಟ್ಟಿದೆ.

## ಪರಾಮರ್ಶನ ಗ್ರಂಥಗಳು:

1. ಅನುಪಮ ಹೆಚ್. ಎಸ್. (2015), ಕ್ರಾಂತಿ ಜ್ಯೋತಿ ಸಾವಿತ್ರಿಬಾಯಿ ಪುಲೆ. ಲಡಾಯಿ ಪ್ರಕಾಶನ, ಗದಗ.
2. ಕೃಷ್ಣಮೂರ್ತಿ ಕೆ. (2020), ಸಾವಿತ್ರಿಬಾಯಿ ಪುಲೆ. ಕಲಾಕುಸುಮ ಕ್ರಿಯೇಷನ್,
3. ಕೊಗಟನೂರ ಶಂಕರಾನಂದ ಎಸ್., ಬಾಂಬೆ ಕರ್ನಾಟಕದ ಸಾಮಾಜಿಕ ಚಳುವಳಿಗಳು. ನವ–ಕರ್ನಾಟಕ ಪ್ರಕಾಶನ, ಹುಬ್ಬಳ್ಳಿ.
4. ಅರ್ಚನ ಎಂ. ಎಸ್. (2017), ಆಧುನಿಕ ಭಾರತದ ಇತಿಹಾಸ. ಚೈತ್ರ ಪ್ರಕಾಶನ, ಬೆಂಗಳೂರು.
5. ಕಣವಿ ಎಸ್. ಜಿ., ಆಧುನಿಕ ಕರ್ನಾಟಕದ ಇತಿಹಾಸ. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಣ, ಧಾರವಾಡ.
6. ಪಾಟೀಲ ಆರ್., ಕರ್ನಾಟಕದಲ್ಲಿ ಸಾಮಾಜಿಕ ಚಳುವಳಿಗಳು. ಪ್ರಗತಿ ಪ್ರಕಾಶನ, ಬೆಂಗಳೂರು.
7. ಕಪ್ಪಗೋಳ ಬಿ., ಆಧುನಿಕ ಭಾರತದ ಸಮಾಜ ಸುಧಾರಕರು. ಬೆಳಗಾವಿ ಪ್ರಕಾಶನ.
8. ಪೋತೆ ಹೆಚ್. ಟಿ., ಅಂಬೇಡ್ಕರ ಭಾರತ. ಸ್ವಪ್ನ ಬುಕ್ ಹೌಸ್, ಬೆಂಗಳೂರು.
9. ಪಾಟೀಲ ಶಂಕರಗೌಡ ಡಿ., ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಕರ್ನಾಟಕ. ನವ ಕರ್ನಾಟಕ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.